ಕಛೇರಿ : +91 80 2335 4039
+91 80 2335 4085
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

**ಸುತ್ತೋಲೆ**

ಸಂಖ್ಯೆ: NVBDCP/EST-7Z/Covid19/2020-21

ದಿನಾಂಕ: 22.12.2022

ವಿಷಯ: ಬದಲಾಗುತ್ತಿರುವ ಕೋವಿಡ್ 19 ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಕ್ರಮಗಳ ಕುರಿತು.

ಉಲ್ಲೇಖ: 1. ಕಾರ್ಯದರ್ಶಿಗಳು, ಭಾರತ ಸರ್ಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: Z.28015/182/2021-DM – cell , ದಿನಾಂಕ: 20.12.2022.
2. ರಾಜ್ಯ ಕೋವಿಡ್ 19 ತಾಂತ್ರಿಕ ಸಲಹಾ ಸಮಿತಿಯ 187 & 188 ಸಭೆಯ ನಡಾವಳಿಯಂತೆ, ದಿನಾಂಕ: 21 ಹಾಗೂ 22 ಡಿಸೆಂಬರ್ 2022.

ಪ್ರಸ್ತುತ, ಚೀನಾ, ಯು ಎಸ್ ಎ ಹಾಗೂ ಜಪಾನ್ ದೇಶಗಳಲ್ಲಿ ಕೋವಿಡ್ 19 ಪ್ರಕರಣಗಳ ಏರಿಕೆಯು ವರದಿಯಾದ ಹಿನ್ನೆಲೆಯಲ್ಲಿ, Test, Track, Treat, Vaccination and adherence to COVID appropriate behavior ಒಳಗೊಂಡಂತೆ 5 ಅಂಶಗಳ ಕಾರ್ಯತಂತ್ರಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ, ಭಾರತ ಸರ್ಕಾರವು ಮಾರ್ಗಸೂಚಿಯನ್ನು ಹೊರಡಿಸಿದೆ. ರಾಜ್ಯದ ಕೋವಿಡ್ 19 ಪರಿಸ್ಥಿತಿಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಆರೋಗ್ಯ ಸಚಿವರು ಪರಿಶೀಲಿಸಿದ್ದಾರೆ.

ಈ ಹಿನ್ನೆಲೆಯಲ್ಲಿ, ಕೆಳಕಂಡ ಶಿಷ್ಟಾಚಾರ ಕ್ರಮಗಳನ್ನು ಪಾಲಿಸಲು ಸೂಚಿಸಲಾಗಿದೆ.

**ಕೋವಿಡ್ 19 ಪರೀಕ್ಷೆ ಹಾಗೂ ಲಸಿಕಾಕರಣ–**

- ಕೋವಿಡ್ 19 ಪರೀಕ್ಷೆಯ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ, ಆಸ್ಪತ್ರೆಗಳಲ್ಲಿ ಎಲ್ಲಾ ILI / SARI ಪ್ರಕರಣಗಳಿಗೆ ಕೋವಿಡ್ 19 ಪರೀಕ್ಷೆ ಮಾಡುವುದು ಕಡ್ಡಾಯವಾಗಿದೆ.
- ಸೋಂಕಿನ ಲಕ್ಷಣಗಳನ್ನು ಹೊಂದಿದವರಿಗೆ ಹಾಗೂ ಖಚಿತ ಪ್ರಕರಣಗಳ ಸಂಪರ್ಕಿತರು ಕೋವಿಡ್ 19 ಪರೀಕ್ಷೆಗೆ ಒಳಪಡುವುದನ್ನು ಖಚಿತಪಡಿಸಿಕೊಳ್ಳಬೇಕು.
- ಸೋಂಕಿನ ಲಕ್ಷಣಗಳನ್ನು ಹೊಂದಿರುವವರನ್ನು ಪರೀಕ್ಷೆ ಒಳಪಡಿಸಲು ಅಗತ್ಯ ಸಂಖ್ಯೆಯ ಟೀಂಗಳನ್ನು ಬಿಬಿಎಂಪಿ ಹಾಗೂ ಜಿಲ್ಲೆಗಳು ಕಾಯೋನ್ಮುಖಗೊಳಿಸುವುದು.
- ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಮಂಗಳೂರು ವಿಮಾನ ನಿಲ್ದಾಣಗಳಲ್ಲಿ, ಅಂತರ ರಾಷ್ಟ್ರೀಯ ಪ್ರಯಾಣಿಕರ ಪೈಕಿ 2% ರನ್ನು ಯಾದೃಚ್ಛಿಕವಾಗಿ ಕೋವಿಡ್ 19 ಪರೀಕ್ಷೆಗೆ ಈಗಾಗಲೇ ಒಳಪಡಿಸಲಾಗುತ್ತಿದ್ದು, ಸದರಿ ಚಟುವಟಿಕೆಯು ಹಾಗೆಯೇ ಮುಂದುವರೆಯಲಿದೆ. ಆದಾಗ್ಯೂ, ಈ ನಿಟ್ಟಿನಲ್ಲಿ ಮುಂಬರುವ ದಿನಗಳಲ್ಲಿ ಭಾರತ ಸರ್ಕಾರವು ಹೊರಡಿಸುವ ಮಾರ್ಗಸೂಚಿಯನ್ನು ಪಾಲಿಸಲಾಗುವುದು.
- ಎಲ್ಲಾ ಕೋವಿಡ್ 19 ಪಾಸಿಟಿವ್ ಫಲಿತಾಂಶ ಬಂದ ಮಾದರಿಗಳನ್ನು (ct value < 25) ಜೀನೋಮ್ ಸೀಕ್ವೆನ್ಸಿಂಗ್‌ಗೆ ಕಡ್ಡಾಯವಾಗಿ ಕಳುಹಿಸಬೇಕು.
- ಕೋವಿಡ್ 19 ಲಸಿಕೆಯ ಬೂಸ್ಟರ್ ಡೋಸ್ ನೀಡುವ ಪ್ರಕ್ರಿಯೆಗೆ ವೇಗ ನೀಡುವ ನಿಟ್ಟಿನಲ್ಲಿ, ಪ್ರಸ್ತುತ ಸಾಧಿಸಲಾಗಿರುವ 20% ಗುರಿಯನ್ನು ಡಿಸೆಂಬರ್ 2022 ರಿಂದ ಜನವರಿ 2023ರ ವರೆಗೆ 50% ರಷ್ಟು ಸಾಧಿಸಬೇಕು. ಇದಕ್ಕಾಗಿ, ಎಲ್ಲಾ ಹಂತಗಳಲ್ಲೂ ಲಸಿಕಾಕರಣದ ಕ್ಯಾಂಪ್‌ಗಳನ್ನು ಆಯೋಜಿಸುವುದು.

Rhp
22.12.22

**ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಸನ್ನದ್ಧತೆ –**

- ಕೋವಿಡ್-19 ಪ್ರಕರಣಗಳ ನಿರ್ವಹಣೆಗಾಗಿ ಪ್ರತ್ಯೇಕವಾಗಿ ಜಿಲ್ಲಾಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಕನಿಷ್ಠ ಸಂಖ್ಯೆಯ ಐಸೋಲೇಷನ್ ಬೆಡ್‌ಗಳನ್ನು ಮೀಸಲಿಡುವುದು.
- ಕೋವಿಡ್-19 ಪ್ರಕರಣಗಳು ಏರಿಕೆಯಾದ ಪಕ್ಷದಲ್ಲಿ, ಸಂದರ್ಭವನ್ನು ನಿರ್ವಹಿಸಲು ಎಲ್ಲಾ ಹಂತಗಳ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳನ್ನು ಸನ್ನದ್ಧವಾಗಿರಿಸುವುದು.
- ಕ್ಲಿನಿಕಲ್ ಸನ್ನದ್ಧತೆಯ ಭಾಗವಾಗಿ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಆಕ್ಸಿಜನ್ ಪೂರೈಕೆ, ಔಷಧಿ ಹಾಗೂ ಬೆಡ್, ಇತ್ಯಾದಿಗಳ ಕುರಿತು ಮಾಹಿತಿ ಪಡೆದು ಸಿದ್ಧವಾಗಿರಿಸುವುದು.
- ಆಕ್ಸಿಜನ್ ಪೂರೈಕೆ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳಲು, ಜಿಲ್ಲಾಸ್ಪತ್ರೆ ಹಾಗೂ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಪ್ರತಿ 15 ದಿನಗಳಗೊಮ್ಮೆ dry run ಮಾಡುವುದು ಸೂಕ್ತ.
- ಆರೋಗ್ಯ ಸಂಸ್ಥೆಗಳ ಎಲ್ಲಾ ವೈದ್ಯರು ಹಾಗೂ ಸಿಬ್ಬಂದಿಗಳು, ಆಸ್ಪತ್ರೆಗೆ ಭೇಟಿ ನೀಡುವ ರೋಗಿಗಳು, ಆರೈಕೆ ಮಾಡುವವರು ಮತ್ತು ಸಂದರ್ಶಕರು ಮಾಸ್ಕ್ ಧರಿಸುವುದು ಕಡ್ಡಾಯವಾಗಿದೆ.
- ಆರೋಗ್ಯ ಸಿಬ್ಬಂದಿಗಳು ಕೋವಿಡ್ 19 ಲಸಿಕೆಯ ಪ್ರಿಕಾಶನರಿ ಡೋಸ್ ಅನ್ನು ಶೀಘ್ರವೇ ಪಡೆಯುವಂತೆ ಸಲಹೆ ನೀಡಲಾಗಿದೆ.

ಕೋವಿಡ್-19 ಮುನ್ನೆಚ್ಚರಿಕೆ ಹಾಗೂ ನಿಯಂತ್ರಣದಲ್ಲಿ ಈವರೆಗೆ ಸಾಧಿಸಲಾಗಿರುವ ಉತ್ತಮ ಅಂಶಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ, ಮೇಲೆ ತಿಳಿಸಿರುವ ಮಾರ್ಗಸೂಚಿಯನ್ನು ಸಂಬಂಧಪಟ್ಟವರಿಗೆ ಪ್ರಚುರಪಡಿಸುವುದು ಹಾಗೂ ಪಾಲನೆಯನ್ನು ಖಚಿತಪಡಿಸಿಕೊಳ್ಳುವಂತೆ ರಾಜ್ಯ / ಜಿಲ್ಲೆಗಳ ಆರೋಗ್ಯ ಪ್ರಾಧಿಕಾರಗಳಿಗೆ ಹಾಗೂ ಬಿ ಬಿ ಎಂ ಪಿ ಆರೋಗ್ಯ ಪ್ರಾಧಿಕಾರಗಳಿಗೆ ಈ ಮೂಲಕ ಸೂಚಿಸಿದೆ.

RL 22.12.22

(ರಂದೀಪ್ ಡಿ.)
ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಇವರಿಗೆ,

1. ಎಲ್ಲಾ ವಿಮಾನಯಾನ ಸಂಸ್ಥೆಗಳ ಮುಖ್ಯಸ್ಥರು.
2. ಮ್ಯಾನೇಜಿಂಗ್ ಡೈರಕ್ಟರ್, ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು.
3. ಏರ್‌ಪೋರ್ಟ್ ಹೆಲ್ತ್ ಆಫೀಸರ್, ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಮಂಗಳೂರು ವಿಮಾನ ನಿಲ್ದಾಣ, ಮಂಗಳೂರು.
4. ವಿಶೇಷ ಆಯುಕ್ತರು – ಆರೋಗ್ಯ & ಮಾಹಿತಿ ತಂತ್ರಜ್ಞಾನ, ಬಿಬಿಎಂಪಿ, ಬೆಂಗಳೂರು.
5. ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ಜಿಲ್ಲೆಗಳು

7. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು , ಎಲ್ಲಾ ಜಿಲ್ಲೆಗಳು
8. ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಎಲ್ಲಾ ಜಿಲ್ಲೆಗಳು
9. ಅಭಿಯಾನ ನಿರ್ದೇಶಕರು – ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಸೌಧ, ಬೆಂಗಳೂರು.
10. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
2. ಮುಖ್ಯ ಆಯುಕ್ತರು – ಬಿ ಬಿ ಎಂ ಪಿ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸನ್ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಆರೋಗ್ಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು.

RL 22.11.22.

Office Tel : +91 80 23354039
+91 80 23354085
E-mail: com-hfws@karnataka.gov.in

# COMMISSIONERATE
## Health &Family Welfare Services

**CIRCULAR**

No: NVBDCP/EST-7Z/Covid19/2020-21 Date: 22nd Dec 2022

Subject: **Protocols to be followed in view of the emerging Covid 19 situation: Regarding.**

Reference: 1. D O from Secretary, Govt. of India, Dept. of Health & F W, No: Z.28015/182/2021- DM – cell, dated : 20.12.2022
2. Proceedings of 187th & 188th meeting of State Covid 19 Technical Advisory Committee, Dated: 21st & 22nd Dec 2022.

In view of the emerging Covid-19 situation in China, USA & Japan, Govt. of India has issued guidelines to enhance the 5 fold strategy of Test, Track, Treat, and Vaccination and ensure adherence to Covid Appropriate behavior.
The emerging Covid scenario in the State was also reviewed by Hon'ble Chief Minister and Hon'ble Health Minister.

With regard to the above, the following Covid-19 protocol is being issued for compliance henceforth –

**Testing & Vaccination -**
- Covid testing is to be enhanced and in view of this, it is mandated that hospitals shall test all the ILI / SARI cases detected.
- Testing to all symptomatics should be ensured, especially the symptomatic contacts of positive cases.
- Districts and BBMP shall make available adequate testing teams so that symptomatic testing is not missed out.
- The exercise of 2% random testing of International arrivals at BIAL, Bengaluru and Mangaluru Airport shall continue and any further guidelines issued in this regard by GOI shall be followed.
- All positive samples (ct value < 25) would be compulsorily sent for Whole Genome Sequencing.
- The booster dose vaccination shall be accelerated, in line with supplies, so that the coverage shall be improved from existing 20% to 50% during Dec 2022 – Jan 2023, by organizing vaccination camps at all levels.

**Public & Private Hospitals Preparedness -**
- District Hospitals and Govt Medical College Hospitals shall make preparations to reserve a minimal number of isolation beds exclusively for Covid patients.
- The Health Care Facilities, both Public & Private shall remain prepared to manage any surge in Covid-19 cases.

RL 22.12.22

- The clinical preparedness of hospitals at District & Taluk level shall be assessed and readied in terms of Oxygen supplies, drugs, beds and manpower.
- All district and taluka hospitals have to undertake the dry run of their oxygen infrastructure regularly - preferably once in 15 days - to ensure oxygen sufficiency preparedness.
- There shall be compulsory face masking by all Doctors and staff at health care facilities, including the patients, caretakers and visitors.
- All Health care staff need to be advised to receive the precautionary dose of vaccination immediately.

The State / District Health Authorities and BBMP Health Authorities need to ensure that the above mentioned guidelines are properly communicated and the same shall be monitored for compliance, in order to sustain the gains achieved so far in Covid-19 prevention and control.

22.12.22

**(Randeep D.)**
**Commissioner**
**Health & Family Welfare Services**

To:

1. Chief Executives of all Airlines.
2. The Managing Director, BIAL, to coordinate the activity
3. The APHO, Bengaluru International Airport & Mangalore Airport.
4. The Manager, Airport Authority of India, Hubballi, Bealgavi, Kalaburagi & Mysore.
5. Managing Director , Seaport – Mangalore & Karwar
6. The Special Commissioner – Health, BBMP, Bengaluru
7. The Deputy Commissioners of all districts
8. CEO, ZP of all districts
9. The District Health and Family Welfare officers of all districts
10. The District Surveillance Officers of all districts
11. The Mission Director-National Health Mission
12. The Director, Health & Family Welfare Services

Copy for kind information to:

1. Chief Secretary, GoK
2. The Chief Commissioner – BBMP, Bengaluru
3. The Principal Secretary to Govt, Department of Health & F Welfare Services, Vikasa Soudha, Bengaluru.
4. PS to Hon'ble Minister for HFW and Medical Education.